**ತುರ್ತು ಗಮನಕ್ಕೆ**

ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು

ಸಂಖ್ಯೆ: ಸಿ1(2) ಸ್ಥಾ.ಪ.ಬಡ್ತಿ–32/2012–13 ದಿನಾಂಕ:21–05–2013

1.ಉಪನಿರ್ದೇಶಕರು (ಆಡಳಿತ)
ಬೆಂಗಳೂರು ಮತ್ತು ಮೈಸೂರು ವಿಭಾಗದ ಜಿಲ್ಲೆಗಳು

2.ಉಪನಿರ್ದೇಶಕರು (ಅಭಿವೃದ್ಧಿ) ಹಾಗು ಪದನಿಮಿತ್ತ ಪ್ರಾಂಶುಪಾಲರು
ಬೆಂಗಳೂರು ಮತ್ತು ಮೈಸೂರು ವಿಭಾಗದ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳು

ವಿಷಯ: ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರ ಹುದ್ದೆಯಲ್ಲಿ ನಿಯಮ–32ರಡಿ ಕರ್ತವ್ಯ ನಿರ್ವಹಿಸುತ್ತಿರುವ ಹಾಗೂ ಗ್ರೇಡ್–2 ಪ್ರೌಢಶಾಲಾ ಸಹ ಶಿಕ್ಷಕರಿಗೆ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರ ವೃಂದಕ್ಕೆ ಸ್ಥಾನಪನ್ನ ಬಡ್ತಿ ನೀಡುವ ಬಗ್ಗೆ.

–000–

ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ಆಯುಕ್ತಾಲಯ ವ್ಯಾಪ್ತಿಯಲ್ಲಿ ಬರುವ ಗ್ರೂಪ್–ಬಿ ಮುಖ್ಯ ಶಿಕ್ಷಕರ ವೃಂದದ 152 ಹುದ್ದೆಗಳಿಗೆ ಸ್ಥಾನಪನ್ನ ಬಡ್ತಿಯನ್ನು ನೀಡುವ ಸಲುವಾಗಿ ಬಡ್ತಿಗೆ ಅರ್ಹರಿರುವ ನಿಯಮ–32ರಡಿ ಕಾರ್ಯ ನಿರ್ವಹಿಸುತ್ತಿರುವ ಪ್ರೌಢ ಶಾಲಾ ಮುಖ್ಯ ಶಿಕ್ಷಕರು ಹಾಗೂ ತತ್ಸಮಾನ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವವರ ಹಾಗೂ ಗ್ರೇಡ್–2 ಪ್ರೌಢಶಾಲಾ ಸಹ ಶಿಕ್ಷಕರುಗಳ ಪಟ್ಟಿಯನ್ನು ತಯಾರಿಸಿ, ಸಂಬಂಧಿಸಿದ ದಾಖಲೆಗಳೊಂದಿಗೆ ಇಲಾಖಾ ಮುಂಬಡ್ತಿ ಸಮಿತಿಗೆ ಮಂಡಿಸಬೇಕಾಗಿದೆ.

ಸ್ಥಾನಪನ್ನ ಬಡ್ತಿಗಾಗಿ ಅರ್ಹರಿರುವ ಶಿಕ್ಷಕರುಗಳ ಪಟ್ಟಿಯನ್ನು ಪರಿಶೀಲಿಸಿ ತಮ್ಮ ವ್ಯಾಪ್ತಿಯಲ್ಲಿ ಬರುವ ಅರ್ಹ ಶಿಕ್ಷಕರಿಗೆ ಸಂಬಂಧಿಸಿದಂತೆ ಈ ಕೆಳಗಿನಂತೆ ಮಾಹಿತಿಯನ್ನು ಅಗತ್ಯ ದಾಖಲೆಗಳೊಂದಿಗೆ ನಿಗದಿತ ದಿನಾಂಕದೊಳಗಾಗಿ ಖುದ್ದಾಗಿ ಸಲ್ಲಿಸುವುದು

- **ನಿಯಮ –32 ರಡಿ ಕಾರ್ಯ ನಿರ್ವಹಿಸುತ್ತಿರುವ ಮುಖ್ಯ ಶಿಕ್ಷಕರಾಗಿದ್ದಲ್ಲಿ ಈ ಪತ್ರದೊಂದಿಗೆ ಲಗತ್ತಿಸಿರುವ ನಮೂನೆ–1 ರಲ್ಲಿ ಜಿಲ್ಲಾ ಉಪನಿರ್ದೇಶಕರು ದೃಢೀಕರಿಸಿ, ನಿಯಮ–32 ರಡಿ ಸ್ಥಳನಿಯುಕ್ತಿಗೊಳಿಸಿರುವ ಆದೇಶದ ಪ್ರತಿಯನ್ನು ಸಲ್ಲಿಸುವುದು.**
- **ನಿಮ್ಮ ಜಿಲ್ಲೆಯಲ್ಲಿ ಸೇವೆ ಸಲ್ಲಿಸುತ್ತಿರುವ ಸಹ ಶಿಕ್ಷಕರಾಗಿದ್ದಲ್ಲಿ ಅವರ ಸೇವಾ ವಿವರಗಳನ್ನು ಈ ಪತ್ರದೊಂದಿಗೆ ಲಗತ್ತಿಸಿರುವ ನಮೂನೆ–1 ರಲ್ಲಿ ಸಂಬಂಧಿಸಿದ ಮುಖ್ಯ ಶಿಕ್ಷಕರಿಂದ / ಸಂಬಂಧಿಸಿದ ಕಛೇರಿ ಮುಖ್ಯಸ್ಥರಿಂದ ದೃಡೀಕರಿಸಿಕೊಂಡು ನಂತರ ಜಿಲ್ಲಾ ಉಪನಿರ್ದೇಶಕರು ದೃಡೀಕರಿಸಿ ಈ ಕೆಳಕಂಡ ದಾಖಲೆಗಳೊಂದಿಗೆ ಸಲ್ಲಿಸಲು ಸೂಚಿಸಿದೆ.**

| | |
|---|---|
| 1 | ಇತ್ತೀಚಿನ 5 ವರ್ಷಗಳ ಕಾರ್ಯ ನಿರ್ವಹಣಾ ವರದಿ ಹಾಗೂ ಕಾರ್ಯ ನಿರ್ವಹಣಾ ವರದಿ ಲಭ್ಯವಿಲ್ಲದ ವರ್ಷಕ್ಕೆ ಮಾತ್ರ ವಿಶೇಷ ವರದಿ (ಕಾರ್ಯ ನಿರ್ವಹಣಾ ವರದಿಗಳಲ್ಲಿ ವರದಿ ಮಾಡುವ, ಪರಿಶೀಲನಾ ಮತ್ತು ಅಂಗೀಕಾರ ಪ್ರಾಧಿಕಾರಿಗಳ ಷರಾ ಮತ್ತು ಸಹಿಗಳೊಂದಿಗೆ ಸಲ್ಲಿಸತಕ್ಕದ್ದು.) |
| 2 | ಶಿಸ್ತಿನಕ್ರಮ / ಇಲಾಖಾ ವಿಚಾರಣೆ ಬಾಕಿ ಇರುವ / ಇಲ್ಲದ ಬಗ್ಗೆ ವಿವರ ಹಾಗೂ ಕ್ರಿಮಿನಲ್ ಮೊಕದ್ದಮೆ ಇಲ್ಲದಿರುವ ಬಗ್ಗೆ ದೃಢೀಕರನ ಪತ್ರ (ಲಗತ್ತಿಸಿರುವ ನಮೂನೆಯಲ್ಲಿ) |
| 3 | ಎಸ್.ಎಸ್.ಎಲ್.ಸಿ ಪ್ರಮಾಣ ಪತ್ರದ ಪ್ರತಿ, ಇಲಾಖಾ ಪರೀಕ್ಷೆ ತೇರ್ಗಡೆ ಆಗಿರುವ ದಾಖಲೆಗಳ ದೃಡೀಕೃತ ಪ್ರತಿ |

| | |
|---|---|
| 4 | ಕನ್ನಡ ಭಾಷಾ ಪರೀಕ್ಷೆ ತೇರ್ಗಡೆ / ವಿನಾಯ್ತಿ ಪಡೆದ ದಾಖಲೆಗಳ ಪ್ರತಿ |
| 5 | ಪ.ಜಾತಿ/ಪಂಗಡಗಳಿಗೆ ಸೇರಿದ ಶಿಕ್ಷಕರಾಗಿದ್ದಲ್ಲಿ ಜಾತಿ ಪ್ರಮಾಣಪತ್ರದ ದೃಢೀಕೃತ ಪ್ರತಿ ಅಥವಾ ಸೇವಾ ಪುಸ್ತಕದ ಉಧೃತ ದೃಢೀಕೃತ ಪ್ರತಿ |
| 6 | ಹಿಂದಿ ಶಿಕ್ಷಕರಾದಲ್ಲಿ ಹಿಂದಿ ಶಿಕ್ಷಣ ಪಾರಂಗತ್ ಪ್ರಮಾಣ ಪತ್ರದ ಪ್ರತಿ, ಪಿ.ಯು.ಸಿ.ಯಲ್ಲಿ ತೇರ್ಗಡೆ ಹೊಂದಿರುವ ಪ್ರಮಾಣ ಪತ್ರದ ಪ್ರತಿ, |
| 7 | ಪದವಿ ಹಾಗು ಬಿಇಡಿ ಪದವಿಯ ದೃಢೀಕೃತ ಪ್ರಮಾಣ ಪತ್ರಗಳು |

ಮೇಲ್ಕಂಡ ವಿವರಗಳೊಂದಿಗೆ ಪ್ರತಿ ಶಿಕ್ಷಕರ ಬಡ್ತಿ ಪ್ರಸ್ತಾವನೆಯನ್ನು ಪ್ರತ್ಯೇಕ ಡೋಸಿಯರ್ ಗಳಲ್ಲಿ ಸಿದ್ದಪಡಿಸಿ ಈ ಕಛೇರಿಗೆ **ದಿನಾಂಕ:15–06–2013**ರೊಳಗಾಗಿ ನಿಮ್ಮ ಕಛೇರಿಯ ಸಿಬ್ಬಂದಿಯವರ ಮೂಲಕ, ಈ ಕಛೇರಿಯಿಂದ ನೆನಪೋಲೆಯನ್ನು ನಿರೀಕ್ಷಿಸದೆ ಮುದ್ದಾಂ ಸಲ್ಲಿಸುವಂತೆ ತಿಳಿಸಿದೆ.

**ಬಡ್ತಿ ಪ್ರಸ್ತಾವನೆಗಳನ್ನು ಸಲ್ಲಿಸುವಾಗ, ಈ ಕೆಳಕಂಡ ಸೂಚನೆಗಳನ್ನು ಗಮನಿಸಲು ಕೋರಿದೆ:–**

1. ಮೇಲಿನ ಪ್ರಕರಣಗಳಲ್ಲದೇ ಸರ್ಕಾರಿ ಘಟಕ, ಟಿ.ಡಿ.ಬಿ ಘಟಕ ಮತ್ತು ಮುನ್ಸಿಪಲ್ ಘಟಕ ಇವುಗಳಲ್ಲಿ ಜೇಷ್ಟತೆಯಲ್ಲಿ ಹಿರಿಯರಾಗಿದ್ದು, ವಿವಿಧ ಕಾರಣಗಳಿಗಾಗಿ ಬಿಟ್ಟು ಹೋಗಿರುವ ಪ್ರಕರಣಗಳಿದ್ದಲ್ಲಿ ಸ್ಥಾನಪನ್ನ ಬಡ್ತಿಗೆ ಅರ್ಹರಿದ್ದಲ್ಲಿ ಅಂತಹ ಪ್ರಕರಣಗಳನ್ನೂ ಸಹ ಸಕಾರಣಗಳೊಂದಿಗೆ ನಮೂನೆ–1 ಹಾಗೂ ಅಗತ್ಯ ದಾಖಲೆಗಳೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸುವುದು. ಪ್ರಸ್ತಾವನೆ ಸಲ್ಲಿಸಬೇಕಾಗಿರುವ **ಕಟ್ ಆಫ್ ಸಂಖ್ಯೆಯು ಈ ಕೆಳಗಿನಂತಿರುತ್ತದೆ.**

   1) **ಪ್ರೌಢ ಶಾಲಾ ಶಿಕ್ಷಕರು ಗ್ರೇಡ್ – 2 1277 ರಿಂದ 1525 ಸಾಮಾನ್ಯ**

   2) **ಪ್ರೌಢ ಶಾಲಾ ಶಿಕ್ಷಕರು ಗ್ರೇಡ್ – 2 4041 ರಿಂದ 4479 ಪರಿಶಿಷ್ಟ ಜಾತಿ**

   3) **ಪ್ರೌಢ ಶಾಲಾ ಶಿಕ್ಷಕರು ಗ್ರೇಡ್ – 2 4862 ರಿಂದ 5278 ಪರಿಶಿಷ್ಟ ಪಂಗಡ**

   **ಈ ಕಟ್ ಆಫ್ ಸಂಖ್ಯೆಗಳನ್ನು ಗಮನದಲ್ಲಿಟ್ಟುಕೊಂಡು ಈ ಜೇಷ್ಟತಾ ಸಂಖ್ಯೆಗಿಂತ ಹಿರಿಯರಾಗಿದ್ದು, ಅರ್ಹತೆ ಇದ್ದರೂ ಸಹ ಹಿಂದೆ ನೀಡಲಾದ ಬಡ್ತಿಯಲ್ಲಿ ಬಿಟ್ಟು ಹೋದಂತಹ ಶಿಕ್ಷಕರಿದ್ದಲ್ಲಿ ಅಂತಹ ಶಿಕ್ಷಕರ ಪ್ರಸ್ತಾವನೆಯನ್ನೂ ಸಹ ಕಳುಹಿಸುವುದು. ಈಗಾಗಲೇ ಪ್ರಸ್ತಾವನೆಯನ್ನು ಈ ಕಛೇರಿಗೆ ಕಳುಹಿಸಿದ್ದಲ್ಲಿ ಅವರ ಹೆಸರಿನ ಮುಂದೆ ಪತ್ರ ಸಂಖ್ಯೆ ಮತ್ತು ದಿನಾಂಕವನ್ನು ನಮೂದಿಸುವುದು.**

   **[ಎ] ಈ ಕಛೇರಿಯ ಅಧಿಕೃತ ಜ್ಞಾಪನ ಸಂಖ್ಯೆ:ಸಿ1[2]ಸ್ಥಾನಪನ್ನ ಬಡ್ತಿ.14/2011–12 ದಿ:27–08–2012 ರಂತೆ ಸ್ಥಾನಪನ್ನಬಡ್ತಿ ಹೊಂದಿರುವ ಶಿಕ್ಷಕರುಗಳಲ್ಲಿ ಕರ್ತವ್ಯಕ್ಕೆ ಹಾಜರಾಗದೇ ಇರುವವರ ಪ್ರಸ್ತಾವನೆ ಮತ್ತೊಮ್ಮೆ ಸಲ್ಲಿಸಬಾರದೆಂದು ತಿಳಿಸಿದೆ.**

2. ಈ ಪತ್ರದೊಂದಿಗೆ ಲಗತ್ತಿಸಿರುವ ಅನುಬಂಧಗಳಲ್ಲಿ ನಮೂದಿಸಿರುವ ಶಿಕ್ಷಕರುಗಳು ತಮ್ಮ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬಗ್ಗೆ ತಮ್ಮ ಜಿಲ್ಲೆಯ ಪ್ರೌಢ ಶಾಲಾ ಸಹ ಶಿಕ್ಷಕರ ಹಾಗೂ ನಿಯಮ–32 ರಡಿ ಕಾರ್ಯ ನಿರ್ವಹಿಸುತ್ತಿರುವ ಮುಖ್ಯ ಶಿಕ್ಷಕರುಗಳ ಸೇವಾ ವಿವರದ ಪಟ್ಟಿಯೊಂದಿಗೆ ತಾಳೆ ಮಾಡಿಕೊಂಡ ನಂತರ ಪ್ರಸ್ತಾವನೆ ಒದಗಿಸುವುದು.
3. ಬಡ್ತಿ ಪ್ರಸ್ತಾವನೆ ಸಲ್ಲಿಸುವಾಗ ಪಟ್ಟಿಯಲ್ಲಿರುವ ಶಿಕ್ಷಕರುಗಳು ಬೇರೆ ಜಿಲ್ಲೆಗಳಿಗೆ ವರ್ಗಾವಣೆಯಾಗಿದ್ದಲ್ಲಿ, ಅವರು ಯಾವ ಜಿಲ್ಲೆಗೆ ವರ್ಗಾವಣೆಯಾಗಿದ್ದಾರೆ ಎಂಬ ಬಗ್ಗೆ ಪೂರ್ಣ ವಿವರಗಳನ್ನು ನೀಡುವುದು ಹಾಗೂ ನಿಧನ, ನಿವೃತ್ತಿ, ಇಲಾಖೆ ಬಿಟ್ಟು ಹೋಗಿದ್ದಲ್ಲಿ ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನ್ಯಾಸಕರ ಹುದ್ದೆಗೆ ಈಗಾಗಲೇ ಬಡ್ತಿ ಹೊಂದಿದಲ್ಲಿ ಅಂತಹ ಶಿಕ್ಷಕರುಗಳ ಹೆಸರುಗಳನ್ನು ಅನುಬಂಧದಲ್ಲಿರುವ ಕ್ರಮಸಂಖ್ಯೆ, ಗ್ರೇಡ್ ಸಂಖ್ಯೆ ಇತ್ಯಾದಿ ವಿವರಗಳೊಂದಿಗೆ ಪಟ್ಟಿಯನ್ನು ತಯಾರಿಸಿ ಸಲ್ಲಿಸುವುದು.

4. ಕಾರ್ಯ ನಿರ್ವಹಣಾ ವರದಿಗಳಲ್ಲಿ ಸಂಬಂಧಿಸಿದ ವರದಿ ಮಾಡುವ, ಪರಿಶೀಲಿಸುವ ಹಾಗೂ ಅಂಗೀಕರಿಸುವ ಪ್ರಾಧಿಕಾರಿಗಳ ಷರಾ, ಸಹಿ ಮತ್ತು ಮೊಹರಿನೊಂದಿಗೆ ಸಲ್ಲಿಸುವುದು. ಈ ವರದಿ ನೀಡಲು ಸಾಧ್ಯವಾಗದೇ ಇರುವ ಪ್ರಕರಣಗಳಲ್ಲಿ ಮಾತ್ರ ಈ ಪತ್ರಕ್ಕೆ ಲಗತ್ತಿಸಿರುವ ನಮೂನೆಯಲ್ಲಿ ವಿಶೇಷ ದೃಢೀಕರಣಪತ್ರ ನೀಡುವುದು.
5. ಅನುಬಂಧದಲ್ಲಿರುವ ಎಲ್ಲಾ ಶಿಕ್ಷಕರುಗಳು ಹಾಗೂ ನಿಯಮ-32 ರಡಿ ಕರ್ತವ್ಯ ನಿರ್ವಹಿಸುತ್ತಿರುವ ಮುಖ್ಯ ಶಿಕ್ಷಕರುಗಳಿಗೆ ಸಂಬಂಧಿಸಿದಂತೆ ಈ ಪತ್ರಕ್ಕೆ ಲಗತ್ತಿಸಿರುವ ನಮೂನೆಯಲ್ಲಿ ಶಿಸ್ತು ಕ್ರಮ ಇಲ್ಲದಿರುವ ಬಗ್ಗೆ ದೃಢೀಕರಣ ಪತ್ರ ನೀಡುವುದು. ಶಿಸ್ತು ಕ್ರಮ/ ಇಲಾಖಾ ವಿಚಾರಣೆ ಬಾಕಿ ಇರುವ ಪ್ರಕರಣಗಳಲ್ಲಿ ಈ ದೃಢೀಕರಣ ಪತ್ರವನ್ನು ನೀಡದೇ, ಪ್ರಕರಣದ ಪ್ರಸ್ತುತ ಹಂತದ ಬಗ್ಗೆ ದಾಖಲೆ ಸಹಿತ ಮಾಹಿತಿಯನ್ನು ಒದಗಿಸುವುದು.
6. ಕ್ರಿಮಿನಲ್ ಮೊಕದ್ದಮ್ಮೆ ಅಥವಾ ನ್ಯಾಯಾಯಲಯದ ಪ್ರಕರಣ ಬಾಕಿ ಇದ್ದಲ್ಲಿ ಅಂತಹ ಶಿಕ್ಷಕರುಗಳ ವಿವರ ಹಾಗೂ ದಾಖಲೆ ಸಹಿತ ಮಾಹಿತಿಯನ್ನು ಒದಗಿಸುವುದು.

**ವಿಶೇಷ ಸೂಚನೆ:-**

**ಬಡ್ತಿಯನ್ನು ನೀಡುವ ಪ್ರಕ್ರಿಯೆಯು ಸಮಯಬದ್ಧ ಪ್ರಕರಣವಾಗಿರುವುದರಿಂದ ಎಲ್ಲ ಉಪ ನಿರ್ದೇಶಕರುಗಳು ವಿಳಂಬ ಮಾಡದೆ ತಮ್ಮ ವೈಯುಕ್ತಿಕ ಗಮನವನ್ನು ಹರಿಸಿ, ಬಡ್ತಿಗೆ ಅರ್ಹರಿರುವ ಎಲ್ಲ ಶಿಕ್ಷಕರುಗಳನ್ನು ಸಂಬಂಧಿಸಿದ ಎಲ್ಲ ದಾಖಲೆಗಳೊಂದಿಗೆ ತಮ್ಮ ಕಛೇರಿಗೆ ಮುದ್ದಾಂ ಕರೆದು ಅವರುಗಳಿಂದ ಮಾಹಿತಿಯನ್ನು ಪಡೆದು ಪ್ರಸ್ತಾವನೆಯನ್ನು ಮೇಲೆ ತಿಳಿಸಿರುವ ಎಲ್ಲಾ ಸೂಚನೆಗಳನ್ವಯ ಸಿದ್ಧಪಡಿಸಿಕೊಳ್ಳತಕ್ಕದ್ದು.**

**ಈ ಪತ್ರದೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ ಸೇವಾ ವಿವರಗಳು ಹಾಗೂ ಅಗತ್ಯ ದಾಖಲೆಗಳ ದೃಢೀಕೃತ ಪ್ರತಿಗಳೊಂದಿಗೆ ಪ್ರತಿ ಶಿಕ್ಷಕರಿಗೆ ಪ್ರತ್ಯೇಕವಾದ ಡೋಸಿಯರ್ ನಲ್ಲಿ ಸಿದ್ಧಪಡಿಸಿ ದಿನಾಂಕ: 15-06-2013 ರಂದು ತಮ್ಮ ಕಛೇರಿಯ ಸಂಬಂಧಿಸಿದ ವಿಷಯ ನಿರ್ವಾಹಕರ ಮೂಲಕ ಈ ಕಛೇರಿಗೆ ಮುದ್ದಾಂ ಕಳುಹಿಸಿ ಕೆಳಕಂಡ ಅಧಿಕಾರಿಗೆ ಸಲ್ಲಿಸಲು ನಿರ್ದೇಶನ ನೀಡುವಂತೆ ತಿಳಿಸಿದೆ.**

**ಪ್ರಸ್ತಾವನೆಯನ್ನು ಮುದ್ದಾಂ ಸಲ್ಲಿಸಬೇಕಾದ ಅಧಿಕಾರಿಯ ವಿವರ :-**

**ಶ್ರೀ ಆರ್. ಶಿವಣ್ಣ ರೆಡ್ಡಿ**
**ಹಿರಿಯ ಸಹಾಯಕ ನಿರ್ದೇಶಕರು,**
**ಸಿಬ್ಬಂಧಿ -1 ವಿಭಾಗ**
(ಆಯುಕ್ತರ ಆದೇಶದ ಮೇರೆಗೆ)

(ಎಸ್.ಎಂ.ಶಾಂತರಾಜು)
ಅಪರ ಆಯುಕ್ತರು (ಆಡಳಿತ)[ಹೆ.ಪ್ರ]
21/5/2013

ಪ್ರತಿಗಳನ್ನು ಈ ಕೆಳಕಂಡವರಿಗೆ ಮಾಹಿತಿಗಾಗಿ ರವಾನಿಸಿದೆ.

1. ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ಆಯುಕ್ತಾಲಯದ ಆಡಳಿತ ವ್ಯಾಪ್ತಿಯಲ್ಲಿ ಬರುವ ಎಲ್ಲಾ ನಿರ್ದೇಶಕರುಗಳಿಗೆ
2. ಕಾರ್ಯದರ್ಶಿಗಳು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಹಾಗೂ ಪದನಿಮಿತ್ತ ವಿಭಾಗೀಯ ಸಹ ನಿರ್ದೇಶಕರು, ಬೆಂಗಳೂರು/ಮೈಸೂರು ವಿಭಾಗ.
3. ಉಪನಿರ್ದೇಶಕರು, ಪ್ರೌಢ ಶಿಕ್ಷಣ, ಆಯುಕ್ತರ ಕಛೇರಿ, ಬೆಂಗಳೂರು.
4. ಕಛೇರಿ ಪ್ರತಿ.

\\Typing3server\typing3server\D\EST1\NAMU\Rule-32-Prom-2012-13.doc

# ನಮೂನೆ–1

ಪಟ್ಟಿಯಲ್ಲಿನ ಕ್ರ.ಸಂ:---------- ಗ್ರೇಡ್–1/ಗ್ರೇಡ್–2 ಜೇಷ್ಠತಾ ಸಂಖ್ಯೆ :_----------______________

ಅರ್ಹ ಗ್ರೇಡ್–1 / 2 ಶಿಕ್ಷಕರಿಗೆ ಗ್ರೂಪ್–ಬಿ ವೃಂದದ ಹುದ್ದೆಗಳಿಗೆ ಸ್ಥಾನಪನ್ನ ಬಡ್ತಿ ನೀಡುವ ಕುರಿತು ಪರಿಶೀಲಿಸಲು ಬೇಕಾದ ಮಾಹಿತಿ.

| ಕ್ರ.ಸಂ | ವಿವರ | ಮಾಹಿತಿ |
|---|---|---|
| 1 | ಶಿಕ್ಷಕರ ಹೆಸರು, ಕಾರ್ಯ ನಿರ್ವಹಿಸುತ್ತಿರುವ ಹುದ್ದೆ ಮತ್ತು ವಿಳಾಸ<br>*(ಸೇವಾ ಪುಸ್ತಕದಲ್ಲಿ ನಮೂದಿಸಿರುವಂತೆ)*<br>*ಹಿಂದಿ ಶಿಕ್ಷಕರಾದಲ್ಲಿ ತಪ್ಪದೇ ಹಿಂದಿ ಶಿಕ್ಷಕರೆಂದು ನಮೂದಿಸುವುದು* | |
| 2 | ಜನ್ಮ ದಿನಾಂಕ | |
| 3 | ಪುರುಷ/ಮಹಿಳೆ | |
| 4 | ವಿದ್ಯಾರ್ಹತೆ | |
| 5 | ಗ್ರೇಡ್–1 ಅಥವಾ ಗ್ರೇಡ್–2 ಸಂಖ್ಯೆ | |
| 6 | ನೇಮಕಾತಿ ವಿಧಾನ (ಟಿಕ್ ಮಾಡುವುದ) | |
| 7 | ಸೇವೆಗೆ ಸೇರಿದ ದಿನಾಂಕ | |
| 8 | ಖಾಯಂ ಪೂರ್ವ ಸೇವಾವಧಿ ಘೋಷಣೆ ಆಗಿದೆಯೇ | |
| 9. | ಎ. ಸ್ಥಳೀಯ ಅಬ್ಯರ್ಥಿಯಾಗಿ ನೇಮಕ ಗೊಂಡವರೇ?<br>ಬಿ. ಹೌದಾದಲ್ಲಿ ಸ್ಥಳೀಯ ಅಬ್ಯರ್ಥಿ ಯಾಗಿ ಯಾವ ದಿನಾಂಕದಿಂದ ಕಾರ್ಯ ನಿರ್ವಹಿಸಿದ್ದೀರಿ.<br>ಸಿ. ಸೇವೆ ಸಕ್ರಮಗೊಂಡ ಆದೇಶ ಸಂಖ್ಯೆ ಮತ್ತು ದಿನಾಂಕ<br>ಡಿ. ಖಾಸಗಿ ಶಾಲೆ ಸರ್ಕಾರಕ್ಕೆ ವಹಿಸಿ ಕೊಂಡ ಶಾಲೆಯಾದಲ್ಲಿ ಯಾವ ಆದೇಶದ ಪ್ರಕಾರ ಸರ್ಕಾರಕ್ಕೆ ವಹಿಸಿಕೊಳ್ಳಲಾಗಿದೆ.<br>ಇ. ಯಾವ ಆದೇಶ ಮತ್ತು ಯಾವ ದಿನಾಂಕದಿಂದ ಸೇವೆ ಸರ್ಕಾರಕ್ಕೆ ಸೇರ್ಪಡೆಯಾಗಿದೆ.<br>ಎಫ್. ನೇರ ನೇಮಕಾತಿ ಆದವರಾದಲ್ಲಿ ನೇಮಕ ಗೊಂಡ ಆದೇಶದ ಸಂಖ್ಯೆ ಮತ್ತು ದಿನಾಂಕ | |
| 10 | ಗ್ರೇಡ್–2 ಹುದ್ದೆಯಲ್ಲಿ 20 ವರ್ಷಗಳ ಸೇವೆ ಪೂರ್ಣ ಗೊಂಡ ದಿನಾಂಕ (ಸ್ಥಳೀಯ ಅಬ್ಯರ್ಥಿಗಳಾದಲ್ಲಿ ಸೇವೆ ಸಕ್ರಮಗೊಂಡ ದಿನಾಂಕದಿಂದ)(ಸರ್ಕಾರ ವಹಿಸಿ ಕೊಂಡ ಖಾಸಗಿ ಶಾಲೆಗಳ ಶಿಕ್ಷಕರಾದಲ್ಲಿ ಸರ್ಕಾರ ವಹಿಸಿಕೊಂಡ ದಿನಾಂಕದಿಂದ) | |
| 11 | ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಕ್ಕೆ ಸೇರಿದವರೇ?<br>**(ಜಾತಿ ಪ್ರಮಾಣಪತ್ರದ ದೃಢೀಕೃತ ಪ್ರತಿ/ ಸೇವಾಪುಸ್ತಕದ ಉಧೃತ ದೃಢೀಕೃತ ಪ್ರತಿ ಲಗತ್ತಿಸುವುದು)** | |

| | | |
|---|---|---|
| 12 | ಇಲಾಖಾ ಪರೀಕ್ಷೆ ತೇರ್ಗಡೆ ವಿವರ<br>**(ದೃಢೀಕೃತ ಪ್ರತಿಗಳನ್ನು ಲಗತ್ತಿಸಬೇಕು)**<br>ಎ) ಅಕೌಂಟ್ಸ್ ಹೈಯರ್<br><br>ಬಿ) ಜನರಲ್ ಲಾ ಭಾಗ–1<br><br>ಸಿ) ಕನ್ನಡ ಭಾಷಾ ಪರೀಕ್ಷೆ<br><br>ಡಿ) ಕನ್ನಡ ಭಾಷಾ ಪರೀಕ್ಷೆ ತೇರ್ಗಡೆ ವಿನಾಯ್ತಿ ಪಡೆದಿದ್ದಲ್ಲಿ, ಎಸ್.ಎಸ್.ಎಲ್.ಸಿ. ತೇರ್ಗಡೆ ಪತ್ರದ ಪ್ರತಿ ಹಾಗೂ ವಿನಾಯ್ತಿ ಪತ್ರ ನಮೂನೆ 5.5 ಕೆ.ಸಿ.ಎಸ್.ಆರ್. ರನ್ವಯ | **ರಿಜಿಸ್ಟರ್ ಸಂಖ್ಯೆ**<br>**ವರ್ಷ** |
| 13 | ದೂರುಗಳು/ಶಿಸ್ತಿನ ಕ್ರಮ/ ಇಲಾಖಾ ವಿಚಾರಣೆ ಬಾಕಿ ಇದ್ದಲ್ಲಿ ವಿವರ | |
| 14 | ಐದು ವರ್ಷಗಳ ಕಾರ್ಯ ನಿರ್ವಹಣಾ ವರದಿಗಳು<br>(2008–09 ರಿಂದ 2012–13ರವರೆಗೆ)<br>ಅಂಗೀಕಾರ ಪ್ರಾಧಿಕಾರದ ಷರಾ ಮತ್ತು ಸಹಿಯೊಂದಿಗೆ<br>**(ಕಾರ್ಯನಿರ್ವಹಣಾ ವರದಿಗಳು/ ಲಭ್ಯವಿಲ್ಲದಿದ್ದಲ್ಲಿ ಮಾತ್ರ ವಿಶೇಷ ವರದಿ)** | |

**ಮೇಲಿನ ವಿವರಗಳನ್ನು ಶಿಕ್ಷಕರ ಸೇವಾಮಸ್ತಕ ಪರಿಶೀಲಿಸಿ, ದೃಢೀಕರಿಸಿದೆ.**

**ಶಾಲೆ/ಸಂಸ್ಥೆಯ ಮುಖ್ಯಸ್ಥರ ಸಹಿ**
**ಮೊಹರಿನೊಂದಿಗೆ.**

**ಉಪ ನಿರ್ದೇಶಕರು(ಆಡಳಿತ)/ಅಭಿವೃದ್ಧಿ**
ಸಾರ್ವಜನಿಕ ಶಿಕ್ಷಣ ಇಲಾಖೆ
– – – – – – – – – ಜಿಲ್ಲೆ.

**ಸೂಚನೆ:** 1.ನಿಯಮ–32ರಡಿ ಗ್ರೂಪ್–ಬಿ ಹುದ್ದೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವವರ ಸೇವಾ ವಿವರಗಳನ್ನು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಸೇವಾಮಸ್ತಕ ಪರಿಶೀಲಿಸಿ ದೃಢೀಕರಿಸಬೇಕು.

2.ಡಯಟ್‌ಗಳಲ್ಲಿ ನಿಯಮ –32 ರಡಿ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರಾಗಿದ್ದಲ್ಲಿ ಪ್ರಾಂಶುಪಾಲರು ದೃಢೀಕರಿಸತಕ್ಕದ್ದು.

**ಗ್ರೇಡ್–1/ಗ್ರೇಡ್–2 ಜೇಷ್ಟತಾ ಸಂಖ್ಯೆ: – – – – – – – –**

**ಘಟಕ: ಸರ್ಕಾರಿ/ಟಿಡಿಬಿ/ಮುನಿಸಿಪಲ್**

**ವಿಶೇಷ ವರದಿ ದೃಢೀಕರಣ ಪತ್ರ**

ಶ್ರೀ/ಶ್ರೀಮತಿ– – – – – – – – – – – – – – – – – – – – – –– – – – – – – – – – – – – – – – – – –– – – – ಇವರ ಸೇವಾ ಮಾಹಿತಿಯನ್ನು ಪರಿಶೀಲಿಸಲಾಗಿದೆ. –– – – – – – – – – ರಿಂದ – – – – – – – – ನೇ ಸಾಲಿನವರೆಗೆ ಇವರ ಕಾರ್ಯ ನಿರ್ವಹಣೆಯಲ್ಲಿ ಯಾವುದೇ ರೀತಿಯ ವ್ಯತಿರಿಕ್ತ ಷರಾ ಇರುವುದಿಲ್ಲ ಹಾಗೂ ಇವರ ಸೇವೆಯು ತೃಪ್ತಿಕರವಾಗಿದೆ ಎಂದು ದೃಢೀಕರಿಸಿದೆ.

ದಿನಾಂಕ:

ಸ್ಥಳ

ಉಪನಿರ್ದೇಶಕರು(ಆಡಳಿತ)/(ಅಭಿವೃದ್ಧಿ)

ಸಹಿ ಹಾಗೂ ಕಛೇರಿಯ ಮೊಹರು

ಸಾರ್ವಜನಿಕ ಶಿಕ್ಷಣ ಇಲಾಖೆ

– – – – – – – – – ಜಿಲ್ಲೆ

**ದೃಢೀಕರಣ ಪತ್ರ**

**ಗ್ರೇಡ್–1/ ಗ್ರೇಡ್–2 ಜೇಷ್ಟತಾ ಸಂಖ್ಯೆ: – – – – – –**

**ಘಟಕ: ಸರ್ಕಾರಿ/ಟಿಡಿಬಿ/ಮುನಿಸಿಪಲ್**

ಶ್ರೀ/ಶ್ರೀಮತಿ– – – – – – – – – – – – – – – – – – – – – –– – – – – – – – – – – – – – – – – – –– – – – ಇವರ ಸೇವಾ ಮಾಹಿತಿಯನ್ನು ಪರಿಶೀಲಿಸಲಾಗಿ, ಸದರಿಯವರ ಮೇಲೆ ಯಾವುದೇ ತೆರವಾದ ಇಲಾಖಾ ವಿಚಾರಣೆ ಯಾಗಲೀ, ನ್ಯಾಯಾಂಗ ವಿಚಾರಣೆಯಾಗಲೀ, ಕ್ರಿಮಿನಲ್ ಮೊಕದ್ದಮೆಯಾಗಲೀ, ಶಿಸ್ತಿನ ಪ್ರಕರಣಗಳಾಗಲೀ ಬಾಕಿ ಇರುವುದಿಲ್ಲವೆಂದು ಮತ್ತು ಹೂಡುವ ಸಂಭವ ಇರುವುದಿಲ್ಲವೆಂದು ದೃಢೀಕರಿಸಿದೆ.

ದಿನಾಂಕ:

ಸ್ಥಳ

ಉಪನಿರ್ದೇಶಕರು(ಆಡಳಿತ)/(ಅಭಿವೃದ್ಧಿ)

ಸಹಿ ಹಾಗೂ ಕಛೇರಿಯ ಮೊಹರು

ಸಾರ್ವಜನಿಕ ಶಿಕ್ಷಣ ಇಲಾಖೆ

– – – – – – – – – ಜಿಲ್ಲೆ